only. They are not giving preference to the candidates who are working and possess experience certificate from the Private Press. Therefore, I request the Government to consider the case of candidates who have experience certificate from the Private Press, so that they can also enter the Government service. Will the Minister kindly issues such instructions to the Employment Exchange?

ಶ್ರೀ ಆರ್. ಎಸ್. ಪಾಟೀಲ್.— ಖಾಸಗಿ ಮುದ್ರಣಾಲಯದಲ್ಲಿ ಅನುಭವ ಪಡೆದವರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಉದ್ಯೋಗ ವಿನಿಮಯ ಕೇಂದ್ರಕ್ಕೆ ಹೋದಾಗ, ಅಲ್ಲಿ ಅವರನ್ನು ನಿರಾಕರಿಸಲಾಗುತ್ತಿದೆ ಎನ್ನುವುದು ಸರಿಯಲ್ಲ. ವಿನಿಮಯ ಕೇಂದ್ರದಲ್ಲಿ ನೊಂದಾಯಿಸುವ ವಿಚಾರ ಕಡ್ಡಾಯವಲ್ಲ. ಸ್ವಪ್ರೇರಣೆ ಮಾತ್ರ. ಪತಕ್ಯಾಗಿ ನಿನ್ನ ಹೆಸರನ್ನು ನೋಂದಾಯಿಸಲಿಲ್ಲವೆಂದು ನಾವು ಯಾರನ್ನು ಕೇಳುವ ಹಾಗಿಲ್ಲ. ಗುಲ್ಬರ್ಗ ವಿಭಾಗದ ಸರ್ಕಾರಿ ಮುದ್ರಣಾಲಯದವರು, ಐದು ವರ್ಷ ಗಳ ಅನುಭವವಿರುವ ಅಸಿಸ್ಟೆಂಟ್ ಕಾಂಪೋಸಿಟರ್‌ಗಳ ಹುದ್ದೆಗೆ ಹೆಸರನ್ನು ಸೂಚಿಸುವಂತೆ ಗುಲ್ಬರ್ಗಾ ವಿಭಾಗದ ಉದ್ಯೋಗ ವಿನಿಮಯ ಕೇಂದ್ರಕ್ಕೆ ಬರೆದರು ಆ ಕೇಂದ್ರದಲ್ಲಿ ಅಂತಹ ಅನುಭವವುಳ್ಳ ಅಭ್ಯರ್ಥಿಗಳಿಲ್ಲದಿದ್ದುದರಿಂದ. ರಾಜ್ಯದ ಎಲ್ಲಾ ಕೇಂದ್ರಗಳಿಗೆ ಸುತ್ತೋಲೆಯನ್ನು ಕಳುಹಿಸಿ, ಅವರುಗಳಿಂದ ಹೆಸರುಗಳನ್ನು ಪಡೆಯಲು ಪ್ರಯತ್ನ ಮಾಡಲಾಯಿತು. ಆದರೆ, ರಾಜ್ಯದ ಯಾವ ಕೇಂದ್ರಗಳಲ್ಲೂ ಅನುಭವವುಳ್ಳ ಅಸಿಸ್ಟೆಂಟ್ ಕಾಂಪೋಸಿಟರ್ ಹುದ್ದೆಗೆ ಬೇಕಾದ ಅಭ್ಯರ್ಥಿಗಳು ಇಲ್ಲದಿದ್ದುದರಿಂದ, ಖಾಸಗಿ ಮುದ್ರಣಾಲಯದಲ್ಲಿ ಸದರಿ ಅನುಭವವನ್ನು ಪಡೆದಿರುವ ಅಭ್ಯರ್ಥಿಗಳಿದ್ದರೆ, ಅವರ ಹೆಸರು ಗಳನ್ನು ತಾವು ಪರಿಶೀಲಿಸಬಹುದೆಂದು ಸರ್ಟಿಫಿಕೇಟನ್ನು ನೀಡಲಾಯಿತು. ಆದರೆ ಇಂತಹವರನ್ನೇ ತೆಗೆದು ಕೊಳ್ಳಿ ಎಂದು ಹೇಳುವ ಕೆಲಸ ಮಾಡುವುದು ಉದ್ಯೋಗ ವಿನಿಮಯ ಕೇಂದ್ರಗಳದು.

ಶ್ರೀ ಬಿ. ವಿ. ಕಕ್ಕೇರಿಯವರು.—ಸರ್ಕಾರಿ ಮುದ್ರಣಾಲಯಗಳಲ್ಲಿ ಮಾತ್ರ ಐದು ವರ್ಷಗಳು ಅನು ಭವವಿರಬೇಕೆಂದು ಕೇಳಿದರೆ ಹೇಗೆ? ಖಾಸಗಿಮುದ್ರಣಾಲಯದಲ್ಲಿ ಕೆಲಸ ಮಾಡಿದವರಲ್ಲಿ ಹುದ್ದೆಗೆ ಬೇಕಾದ ಅರ್ಹತೆ ಮತ್ತು ಅನುಭವವಿದ್ದರೆ, ಅದನ್ನು ಪರಿಗಣಿಸುವುದಕ್ಕೆ ಅಭ್ಯಂತರವೇನು? ಐ.ಟಿ ಐ. ಮತ್ತಿತರ ಸಂಸ್ಥೆಗಳಲ್ಲಿ ಕಾಂಪೋಸಿಟರ್ ಹುದ್ದೆಗೆ ಬೇಕಾದ ತರಬೇತಿಯನ್ನು ನೀಡಲಾಗುವುದು. ಆ ರೀತಿಯ ತರಬೇತಿ ಪಡೆದವರ ಹೆಸರುಗಳನ್ನೇನಾದರೂ ಪಡೆಯಲು ಪ್ರಯತ್ನ ಮಾಡಲಾಗಿದೆಯೆ? ಮಾಡಿರದಿದ್ದರೆ, ಇನ್ನು ಮುಂದಾದರೂ ವಿನಿಮಯ ಕೇಂದ್ರಕ್ಕೆ ಬರೆದು ಅವರ ಹೆಸರುಗಳನ್ನು ಪಡೆಯಲಾಗುವುದೆ? ಅಷ್ಟೇ ಅಲ್ಲದೆ, ಸಾರ್ವಜನಿಕವಾಗಿ ಪ್ರಕಟಣೆ ಹೊರಡಿಸಿ, ಅರ್ಜಿಗಳನ್ನು ಕರೆಯಲು ವ್ಯವಸ್ಥೆ ಮಾಡಬಹುದಲ್ಲವೆ?

ಶ್ರೀ ಆರ್. ಎಸ್. ಪಾಟೀಲ್.—ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನಿರ್ದಿಷ್ಟ ಅರ್ಹತೆ ಮತ್ತು ಅನುಭವವಿರುವ ಅಭ್ಯರ್ಥಿಗಳು ಇಲ್ಲದಿದ್ದರೆ, ಜಾಹಿರಾತು ಮೂಲಕ ಅರ್ಜಿಗಳನ್ನು ಸ್ವೀಕರಿಸ ಬಹುದೆಂದು ಸರ್ಟಿಫಿಕೇಟ್ ನೀಡಲಾಗಿದೆ. ಐ.ಟಿ.ಐ. ಮತ್ತಿತರ ಸಂಸ್ಥೆಗಳಿಂದ ಹೆಸರುಗಳನ್ನು ತರಿಸಿಕೊಳ್ಳಿ ಎಂದು ಹೇಳುವ ಹಕ್ಕು ವಿನಿಮಯ ಕೇಂದ್ರಗಳಿಗಿಲ್ಲ ಅದಂದರಿಂದ. ಈ ಪ್ರಶ್ನೆ ಈಗ ಉದ್ಭವಿಸುವುದಿಲ್ಲ. ಸರ್ಟಿಫಿಕೇಟ್ ನೀಡಲ ಗಿದೆ, ಅವರು ಸಾರ್ವಜನಿಕವಾಗಿ ಅರ್ಜಿಗಳನ್ನು ಕರೆಯಬಹುದು.

Collection of Water Rate on Lands for which water is not supplied.

204 SRI J. M. REDDY (Mulbagal).—Will the Chief Minister be pleased to state:—

(*a*) whether the Government intend to reconsider the question of levying of water rate so as to benefit the ryots since the water rate fixed in Mulbagal taluk from 1964–65 up-to-date covers the lands which have not got the permanent irrigation facilities ;

(*b*) whether the Government would withhold collection of taxes on the lands which have not got permanent irrigation facilities and

where crops in Mulbagal taluk, have withered due to the absence of irrigation facilities ?

SRI D. B. CHANDRE GOWDA (Minister of Minor Irrigation) [On behalf of (SRI D. Devaraj Urs).—

(*a*) Water rate is made applicable to the lands for which water is supplied in Mulbagal taluk as per the provisions of the Mysore Irrigation (Levy of Water Rate) Act, 1965.

(*b*) The usual land revenue was collected since water conditions during 1977–78 were favourable. But, Remission of land Revenue was granted in respect of 36 villages in the taluk as whether conditions were unfavourable during 1976–77, collection of entire land revenue was suspended in respect of 125 villages and half of the collection of land revenue was suspended in respect of 133 villages.

ಶ್ರೀ ಜೆ. ಎಂ. ರೆಡ್ಡಿ.—ಸ್ವಾಮಿ, ತಾವು ಕಾನೂನು ರೀತಿ ವಸೂಲು ಮಾಡುತ್ತಿದ್ದೇವೆಂದು ತಿಳಿಸಿದ್ದೀರಿ. ಆದರೆ ಕೆಲವು ಕೆರೆಗಳಲ್ಲಿ ನೀರು ಇಲ್ಲದೇ ಬೆಳೆಗಳು ಆಗಿಲ್ಲ, ಅಂತಹ ಜಮೀನುಗಳಿಗೆ ರಿಯಾಯಿತಿ ಮಾಡಲಿಕ್ಕೆ ಸರ್ಕಾರ ಸಿದ್ಧ ಇದೆಯೇ?

† ಶ್ರೀ ಡಿ. ಬಿ. ಚಂದ್ರೇಗೌಡ.—೧೯೭೬-೭೭ ನೇ ಸಾಲಿನಲ್ಲಿ ಹವಾಮಾನ ಪರಿಸ್ಥಿತಿ ಸರಿ ಇಲ್ಲ ವೆನ್ನುವ ಕಾರಣದಿಂದ ಕಂದಾಯ ವಸೂಲಾತಿ ಮುಂದೂಡಲಾಗಿದ್ದು ೧೯೭೭-೭೮ಕ್ಕೆ ಹವಾಮಾನ ಪರಿಸ್ಥಿತಿ ಅನುಕೂಲವಾಗಿದ್ದ ಪ್ರಯುಕ್ತ ವಸೂಲು ಕ್ರಮ ಕೈಗೊಂಡಿದೆ ಈ ರೀತಿ ಕ್ರಮ ಕೈಗೊಳ್ಳುವ ಮುನ್ನ ಸರ್ಕಾರಿ ಅಧಿಕಾರಿಗಳಿಂದ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಿ ಎಲ್ಲಿ ಮುಂದಕ್ಕೆ ಹಾಕುವ ಪರಿಸ್ಥಿತಿ ಇದೆ ಅದನ್ನು ಮಾಡಿದ್ದೇವೆ. ಆದ್ದರಿಂದ ಈಗ ಈ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಜೆ. ಎಂ. ರೆಡ್ಡಿ, —ಸ್ವಾಮಿ, ನಾನು ವಾಟರ್‌ರೇಟ್ ಅಂದರೆ ನೀರಿನ ತೆರಿಗೆ ಬಗ್ಗೆ ಮಾತ್ರ ಕೇಳಿದ್ದು.

ಶ್ರೀ ಡಿ. ಬಿ. ಚಂದ್ರೇಗೌಡ.—ನಾವು ವಾಟರ್ ರೇಟ್ ವಸೂಲಾತಿ ವಿಚಾರದಲ್ಲಿ ಇರಿಗೇಷನ್ ಶಾಸನದ ಮೇರೆಗೆ ವಸೂಲು ಮಾಡುತ್ತಿದ್ದೇವೆ. ಎಲ್ಲಿ ನೀರನ್ನು ಒದಗಿಸಿದ್ದೇವೆ ಅಲ್ಲಿ ವಸೂಲು ಮಾಡುತ್ತಿದ್ದೇವೆ.

ಶ್ರೀ ಜೆ. ಎಂ. ರೆಡ್ಡಿ.—ಸ್ವಾಮಿ, ೧೯೭೬-೭೭ನೇ ಇಸವಿಯಲ್ಲಿ ಕೆಲವು ಕಾರಣಗಳಿಂದ ಮಾಡಿದ್ದೇವೆಂದು ತಿಳಿಸಿದ್ದೀರಿ. ಯಿಕ್ಕ ಕಾರಣಗಳ ಮೇಲೆ ವಸೂಲಾತಿ ನಿಲ್ಲಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಡಿ. ಬಿ. ಚಂದ್ರೇಗೌಡ.—ಸ್ವಾಮಿ, ನೆಲಕಂದಾಯ ವಿನಾಯ್ತಿ ಮಾಡಿರುವುದು, ಅಲ್ಲಿಂದ ಬಂದಂತಹ ಹವಾಮಾನ ಪರಿಸ್ಥಿತಿಯ ವರದಿಯ ಮೇಲೆ ೩೬ ಗ್ರಾಮಗಳಿಗೆ ನೆಲಕಂದಾಯವನ್ನು ವಸೂಲಿ ಮಾಡದೆ ವಿನಾಯಿತಿ ಮಂಜೂರು ಮಾಡಲಾಗಿದೆ. ಹಾಗೂ ೧೨೫ ಗ್ರಾಮಗಳಿಗೆ ಪೂರ್ತಿ ನೆಲಕಂದಾಯವನ್ನು ಸ್ಥಗಿತಗೊಳಿಸಲಾಗಿದೆ ಮತ್ತು ೧೩೩ ಗ್ರಾಮಗಳಿಗೆ ಅರ್ಧ ನೆಲ ಕಂದಾಯವನ್ನು ಸ್ಥಗಿತಗೊಳಿಸಲಾಗಿದೆ. ಈ ರೀತಿ ವರದಿಯ ಆಧಾರದ ಮೇಲೆ ಎಷ್ಟು ಮಾಡಬೇಕು ಎಂದು ಹೇಳಿದ್ದಾರೆ ಅಷ್ಟಕ್ಕೆ ಮಾಡಿದ್ದೇವೆ.

ಶ್ರೀ ಕೆ. ಯೆಂಕಟಪ್ಪ.—ಸ್ವಾಮಿ, ನೀರಿನ ತೆರಿಗೆಯನ್ನು ಹಾಕಬೇಕಾದರೆ ನಿಯಮಾವಳಿ ಪ್ರಕಾರ ಹಾಕುತ್ತೇವೆಂದು ಹೇಳಿದ್ದೀರಿ. ತಪ್ಪು ನಿಯಮಾವಳಿ, ಕಾನೂನು ಪುಸ್ತಕದಲ್ಲಿ ಇರತಕ್ಕದ್ದನ್ನು ನೋಡಿದರೆ ನಿಮ್ಮ ಇಲಾಖಾ ಅಧಿಕಾರಿಗಳು ಪ್ರತಿವರ್ಷ ಎಷ್ಟು ಎಕರೆಗೆ ನೀರನ್ನು ಕೊಡುತ್ತೇವೆಂದು ರಿವಿನ್ಯೂ ಇಲಾಖೆಗೆ ತಿಳಿಸಿದ ಮೇಲೆ ರೆವಿನ್ಯೂ ಇಲಾಖೆಯವರು ನೀರಿನ ಕಂದಾಯವನ್ನು ವಿಧಿಸುತ್ತಾರೆ. ಆದರೆ ನಿಮ್ಮ ಇಲಾಖೆಯವರು ಪುರಾತನ ಕಾಲದಲ್ಲಿ ಅಂದರೆ ೧೦೦ ವರ್ಷಗಳ ಹಿಂದೆ ಏನು ಮಾಡಿದ್ದರು, ಆ

ಮಾಡಿದಂತಹ ಅಚ್ಚು ಕಟ್ಟಿನ ಮೇಲೆ ನೀರಿನ ತೆರಿಗೆಯನ್ನು ಹಾಕತಕ್ಕದ್ದು ನಡೆದಿದೆ. ಆದ್ದರಿಂದ ತಾವು ಪುನರ್‌ಪರಿಶೀಲನೆ ಮಾಡಿ ಪ್ರತಿಯೊಂದು ಸ್ಲೂಯಿಸ್‌ನಲ್ಲಿ ಎಷ್ಟು ನೀರಾವರಿಯಾಗುತ್ತದೆಂದು ನೋಡ ಲಿಕ್ಕೆ ಸರ್ಕಾರದಿಂದ ಆದೇಶ ಕೊಡುತ್ತೀರಾ ?

ಶ್ರೀ ಡಿ. ಬಿ. ಚಂದ್ರೇಗೌಡ.—ನೀರಿನ ತೆರಿಗೆಯನ್ನು ವಿಧಿಸಬೇಕಾದರೆ ಓಸೀನೇ ನಿಬಂಧನೆ ಏನಿದೆ ಇದಕ್ಕೆ ಶಾಸನದಲ್ಲಿಯೇ ಅವಕಾಶವಿದೆ. ಯಾರಿಗೆ ತೊಂದರೆಯಾಗುತ್ತದೆ ಅವರು ಸಂಬಂಧಪಟ್ಟ ಅಸಿಸ್ಟೆಂಟ್ ಕಮಿಷನರ್ ಅಥವಾ ಎಕ್ಸಿಕ್ಯುಟೀವ್ ಇಂಜಿನಿಯರ್‌ಗೆ ತಮ್ಮ ಅಪೀಲ್ ಹಾಕಿ ಅವರ ಗಮನಕ್ಕೆ ತಂದರೆ ಶಾಸನದಲ್ಲಿಯೇ ಅವಕಾಶ ಇದೆ. ಇದರ ಬಗ್ಗೆ ಹೊಸದಾಗಿ ಆದೇಶ ಕೊಡತಕ್ಕ ಅವಶ್ಯಕತೆ ಇಲ್ಲ.

Janatha Houses in Shimoga District.

239 SRI L. T. THIMMAPPA HEGDE (Sagar).—Will the Minister of State for Housing be pleased to state:—

(*a*) the number of Janatha Houses constructed in Shimoga district ;out of them, the number of houses constructed in Sagar taluk and the year in which they were constructed ;

(*b*) whether the said houses are in good condition or whether it has come to the notice of the Government that large number of houses are in dilapidated conditions ;

(*c*) whether the houses which are in dilapidated condition were constructed through contractor ; if so, whether it has come to the notice of the Government that due to defects in the construction and not using good quality woods which has lead to the houses being in dilapidated conditions ?

SRI P. F. RODRIGUES (Minister of State for Housing).—

(*a*) 7198.

732

Details of Janatha Houses Constructed in Sagar taluk

		No. of Janatha Houses		Low Income Houses
I Stage	...	1973-74	50	...
II Stage	...	1974-75	120	...
III Stage	...	1975-76	100	...
IV Stage	...	1976-77	126	50
V Stage	...	1977-78	137	...
VI Stage	...	1978-79	85	64
		Total	618	+ 114= 732